ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು-01 ದೂರವಾಣಿ ಸಂಖ್ಯೆ-080-22123792

ಸಂಖ್ಯೆ:ಆರ್.ಎಂ.ಎಸ್.ಎ./ಆವಿ/ದಾಖಲಾತಿ/12-13/01/2011-12 ದಿನಾಂಕ: 07-03-2012

**ಸುತ್ತೋಲೆ**

**ವಿಷಯ :** 2012-13ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಸಂಬಂಧ ಮಾರ್ಗಸೂಚಿ.

1. **ಪರೀಕ್ಷಾ ಪೂರ್ವ ಚಟುವಟಿಕೆಗಳು:** 2012-13ನೇ ಸಾಲಿನಿಂದ ಆದರ್ಶ ವಿದ್ಯಾಲಯಗಳಲ್ಲಿ 8ನೇ ತರಗತಿ ಸೇರ್ಪಡೆ ಆಗಲಿದ್ದು, 6, 7 & 8 ರಿಂದ ಪ್ರತಿ ಶಾಲೆಯಲ್ಲಿ ಒಟ್ಟು 6 ವಿಭಾಗಗಳಂತೆ 240 ವಿದ್ಯಾರ್ಥಿಗಳು ವ್ಯಾಸಂಗ ಮಾಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಲಿ ಇರುವ ತಾತ್ಕಾಲಿಕ ವ್ಯವಸ್ಥೆಯ ಶಾಲೆಗಳಲ್ಲಿ ಕನಿಷ್ಠ 7 ಕೊಠಡಿಗಳು ಲಭ್ಯವಿರಬೇಕು. ಇಲ್ಲದಿದ್ದಲ್ಲಿ ಅದೇ ತಾಲ್ಲೂಕಿನ ಸಮೀಪದಲ್ಲಿ ಅವಶ್ಯಕ ಕೊಠಡಿಗಳು ಮತ್ತು ಇತರೆ ಕನಿಷ್ಠ ಭೌತಿಕ ಸೌಲಭ್ಯಗಳಿರುವ ಶಾಲೆಯನ್ನು ಆಯ್ಕೆ ಮಾಡಿಕೊಳ್ಳುವುದು. 2012-13ನೇ ಸಾಲಿನಿಂದ ಶಾಲೆಯನ್ನು ಬದಲಾದ ಜಾಗದಲ್ಲಿ ನಡೆಸುವ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಮಾಹಿತಿ ನೀಡುವುದು. ಈ ಬಗ್ಗೆ ಪ್ರಚಾರದ ವೇಳೆಯಲ್ಲಿ ಸ್ಪಷ್ಟವಾಗಿ ತಿಳಿಸುವುದು.

**(ಕ್ರಮ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು)**

2. **ಉಪನಿರ್ದೇಶಕರು ಕೈಗೊಳ್ಳಬೇಕಾದ ಕ್ರಮಗಳು**
   - ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿ 2012-13ನೇ ಸಾಲಿನ ಆಯ್ಕೆ ಪರೀಕ್ಷೆ ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸುವುದು.
   - ಪರೀಕ್ಷಾ ಕೇಂದ್ರವನ್ನು ಗುರುತಿಸುವುದು, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳು ಈ ಅವಧಿಯಲ್ಲಿ ನಡೆಯುವುದರಿಂದ ಸೂಕ್ತ ಶಾಲೆಯನ್ನು ಪರೀಕ್ಷಾ ಕೇಂದ್ರವನ್ನಾಗಿ ಗುರುತಿಸುವುದು.
   - ಅರ್ಜಿ ನಮೂನೆಗಳು ಬಿ.ಇ.ಓ ಕಛೇರಿ ಮತ್ತು ಆದರ್ಶ ವಿದ್ಯಾಲಯಗಳಲ್ಲಿ ಉಚಿತವಾಗಿ ದೊರೆಯುವಂತೆ ಕ್ರಮ ವಹಿಸುವುದು.
   - ಪರೀಕ್ಷೆ ಬಗ್ಗೆ ಮಾಹಿತಿಯನ್ನು ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಲಭ್ಯವಾಗುವಂತೆ ಮಾಡುವುದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು. ಇದಕ್ಕೆ ಬೇಕಾದ ವ್ಯಾಪಕ ಪ್ರಚಾರ ಉಚಿತವಾಗಿ ಮಾಡಲು ಕ್ರಮವಹಿಸುವುದು.
   - ಉಪನಿರ್ದೇಶಕರು (ಅಭಿವೃದ್ಧಿ) ರವರು ಈ ಆಯ್ಕೆ ಪರೀಕ್ಷೆಯನ್ನು ನಡೆಸಲಿದ್ದು ಅವರಿಗೆ ಬೇಕಾಗುವ ಎಲ್ಲಾ ಆಡಳಿತಾತ್ಮಕ ಸಹಕಾರ ನೀಡುವುದು.

3. **ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆರವರು ಕೈಗೊಳ್ಳಬೇಕಾದ ಕ್ರಮಗಳು**
   - ಜಿಲ್ಲೆಯಲ್ಲಿ ನಡೆಯುವ ಆದರ್ಶ ವಿದ್ಯಾಲಯಗಳ ಆಯ್ಕೆ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಯಶಸ್ವಿಯಾಗಿ ನಿರ್ವಹಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.
   - ಈ ಪರೀಕ್ಷಾ ಕಾರ್ಯಕ್ಕಾಗಿ ಒಬ್ಬ ಹಿರಿಯ ಉಪನ್ಯಾಸಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನದ ಜವಾಬ್ದಾರಿಯನ್ನು ನೀಡುವುದು.
   - ಜಿಲ್ಲೆಯಲ್ಲಿನ ಆದರ್ಶ ವಿದ್ಯಾಲಯಗಳ ಸಂಖ್ಯೆಗನುಗುಣವಾಗಿ ಹಿರಿಯ ಉಪನ್ಯಾಸಕರು/ ಉಪನ್ಯಾಸಕರನ್ನು ತಾಲ್ಲೂಕು ನೋಡಲ್ ಅಧಿಕಾರಿಗಳನ್ನು ನೇಮಿಸುವುದು.

- ಜಿಲ್ಲಾ ನೋಡಲ್ ಅಧಿಕಾರಿಗಳು ರಾಜ್ಯ ಕಛೇರಿ ಮತ್ತು ಸಿ.ಎ.ಸಿ ಯಿಂದ ಬರುವ ಮಾರ್ಗಸೂಚಿ ಹಾಗು ಸುತ್ತೋಲೆಗಳ ಪ್ರಕಾರ ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದು.
- ಪರೀಕ್ಷೆ ಮತ್ತು ಮೌಲ್ಯಮಾಪನ ಪರಿಣಾಮಕಾರಿಯಾಗಿ ನಡೆಯಲು ಅವಶ್ಯ ಸಭೆ ನಡೆಸಿ ಸೂಚನೆಗಳನ್ನು ನೀಡುವುದು.
- ಪರೀಕ್ಷಾ ಗೌಪ್ಯತೆಯನ್ನು ಕಾಪಾಡುವಲ್ಲಿ ಅವಶ್ಯ ಕ್ರಮ ಕೈಗೊಳ್ಳುವುದು.

4. **ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು**

- ಆದರ್ಶ ವಿದ್ಯಾಲಯಗಳಿಗೆ ನಡೆಯುವ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಅರ್ಜಿಗಳು, ವೇಳಾಪಟ್ಟಿ ಅರ್ಜಿಗಳು ಇಲಾಖಾ ವೆಬ್ ಸೈಟ್ www.ssakarnataka.gov.in ಹಾಗೂ www.schooleducation.kar.nic.in ನಲ್ಲಿ ಸಹ ಲಭ್ಯವಿರುತ್ತದೆ ಎಂಬ ಮಾಹಿತಿಮತ್ತು ಮಾಹಿತಿಗಳು ಸಾರ್ವಜನಿಕರಿಗೆ ಕಛೇರಿಯಲ್ಲಿ ದಿನಾಂಕ: 12-03-2012 ರಿಂದ 24-03-2012ರವರೆಗೆ ಉಚಿತವಾಗಿ ಲಭ್ಯವಾಗುವಂತೆ ಕ್ರಮ ವಹಿಸುವುದು.
- ತಾಲ್ಲೂಕು ಹಂತದಲ್ಲಿ ಒಬ್ಬ ಜವಾಬ್ದಾರಿಯುತ ಅಧಿಕಾರಿ/ಸಿಬ್ಬಂದಿಯನ್ನು ಅರ್ಜಿ ವಿತರಿಸಲು ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ಪಡೆಯಲು, ಗಣಕೀಕರಣ, ಪರೀಕ್ಷಾ ಕಾರ್ಯ ಸಿದ್ಧತೆ ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಗುರ್ತಿಸಿ ನೇಮಿಸುವುದು. ಈ ಅಧಿಕಾರಿಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳ ವಿವರವನ್ನು ದಿನಾಂಕ: 15-03-2012 ರೊಳಗೆ ನೀಡುವುದು.
- ಆದರ್ಶ ವಿದ್ಯಾಲಯ ಮತ್ತು ಬಿ.ಇ.ಓ ಕಛೇರಿಯಲ್ಲಿ ಸಾಕಷ್ಟು ಮತ್ತು ಬೇಡಿಕೆಗೆ ತಕ್ಕಂತೆ ಝೆರಾಕ್ಸ್ ಮಾಡಿಸಿ ಅರ್ಜಿಗಳು ಲಭ್ಯವಿರುವಂತೆ ಕ್ರಮ ವಹಿಸುವುದು ಹಾಗೂ ಉಚಿತವಾಗಿ ವಿತರಿಸಲು ಕ್ರಮ ಕೈಗೊಳ್ಳುವುದು. ಅರ್ಜಿಗಳನ್ನು ಉಚಿತವಾಗಿ ವಿತರಿಸಿದ ಬಗ್ಗೆ ಆದರ್ಶ ಶಾಲಾ ಹಂತದಲ್ಲಿ ಹಾಗೂ ಬ್ಲಾಕ್ ಹಂತದಲ್ಲಿ ವಹಿಯನ್ನು ನಿರ್ವಹಿಸುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಲ್ಲಾ ಶಾಲೆಗಳಲ್ಲಿ 5ನೇ ತರಗತಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ಬಗ್ಗೆ ತಿಳಿಸಿ ಪರೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸುವುದು ಹಾಗೂ 5ನೇ ತರಗತಿ ಇರುವ ಎಲ್ಲಾ ಸರ್ಕಾರಿ ಶಾಲೆಯಲ್ಲಿ ಈ ಪರೀಕ್ಷೆ ಅರ್ಜಿ ಲಭ್ಯವಾಗುವಂತೆ ಕ್ರಮ ವಹಿಸುವುದು.
- ಸ್ಥಳೀಯ ದಿನಪತ್ರಿಕೆಗಳಲ್ಲಿ (12-03-2012 ರಿಂದ 24-03-2012 ರವರೆಗೆ ಸ್ಥಳೀಯ ವಿಶೇಷತೆ, ವೈವಿಧ್ಯತೆ ಪರಿಗಣಿಸಿಕೊಂಡು) ಸುದ್ದಿ ನೀಡುವ ಮೂಲಕ ಉಚಿತವಾಗಿ ಪ್ರಚಾರ ಮಾಡುವುದು.
- ತಾಲ್ಲೂಕಿನ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರ ಸಭೆ ನಡೆಸಿ ಅವರ ಮೂಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಮೂಲಕ, ಇತರೆ ಯಾವುದೇ ಸೂಕ್ತ ವಿಧಾನಗಳ ಮೂಲಕ ಮಾಹಿತಿ ನೀಡುವುದು.
- ಪರೀಕ್ಷಾ ಕೇಂದ್ರವನ್ನು ಗುರುತಿಸುವುದು. ಡಯಟ್‌ನಿಂದ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳಿಗೆ ಎಲ್ಲಾ ಸಹಕಾರ ನೀಡುವುದು.
- ಶಾಂತಿಯುತವಾಗಿ ಪರೀಕ್ಷೆ ನಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.
- ಜಿಲ್ಲಾ ಕೇಂದ್ರದಿಂದ ಪ್ರಶ್ನೆ ಪತ್ರಿಕೆಗಳನ್ನು ಪಡೆದು ತಾಲ್ಲುಕು ಖಜಾನೆಯಲ್ಲಿ ಸುರಕ್ಷಿತವಾಗಿಡಲು ಕ್ರಮವಹಿಸುವುದು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ನಿಗದಿತ ಸಮಯದಲ್ಲಿ ವಿತರಿಸುವುದು.
- ಪರೀಕ್ಷಾ ಗೌಪ್ಯತೆಯನ್ನು ಕಾಪಾಡುವಲ್ಲಿ ಅವಶ್ಯ ಕ್ರಮ ಕೈಗೊಳ್ಳುವುದು.

**ಅನುಬಂಧ**- ಆದರ್ಶ ವಿದ್ಯಾಲಯಗಳ ದಾಖಲಾತಿ ಸಂಬಂಧ ಈ ಕೆಳಗಿನ ವೇಳಾಪಟ್ಟಿಯನ್ನು ಅನುಸರಿಸುವುದು:

| ಕ್ರ.ಸಂ. | ವಿವರ | ಜವಾಬ್ದಾರಿ | ದಿನಾಂಕ |
|---|---|---|---|
| 1 | ಪ್ರಚಾರ/ಪ್ರಕಟಣೆ | ಬಿ.ಇ.ಓ. ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು | ದಿನಾಂಕ: 12-03-2012 ರಿಂದ |
| 2 | ಅರ್ಜಿ ವಿತರಣೆ | ಬಿ.ಇ.ಓ. ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು | ದಿನಾಂಕ: 12-03-2012 ರಿಂದ 24-03-2012 ರ ವರೆಗೆ |
| 3 | ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವುದು. | ಬಿ.ಇ.ಓ. ಕಛೇರಿಯಲ್ಲಿ ಗುರುತಿಸಿರುವ ಬ್ಲಾಕ್ ನೋಡಲ್ ಅಧಿಕಾರಿಗಳು | ದಿನಾಂಕ: 26-03-2012 ರಂದು ಸಂಜೆ 5.00 ಗಂಟೆಯವರೆಗೆ |
| 4 | ಅರ್ಜಿಗಳ ಪರಿಶೀಲನೆ, ಪ್ರವೇಶ ಪತ್ರ ನೀಡಿಕೆ ಮತ್ತು ಗಣಕೀಕರಣ | ಬಿ.ಇ.ಓ. ಕಛೇರಿಯಲ್ಲಿ ಗುರುತಿಸಿರುವ ಬ್ಲಾಕ್ ನೋಡಲ್ ಅಧಿಕಾರಿಗಳು (ಡೇಟಾ ಎಂಟ್ರಿ ಅಪರೇಟರ್‌ಗಳ ಸಹಕಾರದಿಂದ ) | ಆಯಾ ದಿನಾಂಕದಂದು ಮತ್ತು ದಿನಾಂಕ:29-03-2012 ರವರೆಗೆ |
| 5 | ಗಣಕೀಕರಿಸಲಾದ ಅರ್ಜಿಗಳ ವಿವರದ ಡೇಟಾವನ್ನು ಪರಿಶೀಲಿಸಿ ಜಿಲ್ಲಾ ಡಿ.ವೈ.ಪಿ.ಸಿಗಳಿಗೆ ನೀಡುವುದು | ಬ್ಲಾಕ್ ನೋಡಲ್ ಅಧಿಕಾರಿಗಳು (ಡೇಟಾ ಎಂಟ್ರಿ ಅಪರೇಟರ್ ಗಳ ಸಹಕಾರದಿಂದ ) | ದಿನಾಂಕ:30-03-2012 ರಂದು |
| 6 | ಬ್ಲಾಕ್ ಹಂತದಲ್ಲಿ ಗಣಕೀಕರಿಸಲಾದ ಅರ್ಜಿಗಳ ವಿವರದ ಡೇಟಾವನ್ನು ಪರಿಶೀಲಿಸಿ ರಾಜ್ಯ ಹಂತಕ್ಕೆ ಖುದ್ದಾಗಿ ತಲುಪಿಸುವುದು. | ಡಿ.ವೈ.ಪಿ.ಸಿ. / ಎಸ್.ಎಸ್.ಎ ಕಂಪ್ಯೂಟರ್ ಪ್ರೋಗ್ರಾಮರ್‌ಗಳು | ದಿನಾಂಕ: 31-03-2012 ರಂದು |
| 7 | ಪ್ರವೇಶ ಪರೀಕ್ಷೆ | ಬ್ಲಾಕ್ ಹಂತದಲ್ಲಿ | ದಿನಾಂಕ: 15-04-2012 ರಂದು ಬೆಳಿಗ್ಗೆ 10.30- 12-30. |
| 8 | ಉತ್ತರ ಪತ್ರಿಕೆಗಳನ್ನು ಡಯಟ್ ಹಂತಕ್ಕೆ ರವಾನಿಸುವುದು | ಬಿ.ಇ.ಓ. ಮತ್ತು ಬ್ಲಾಕ್ ನೋಡಲ್ ಅಧಿಕಾರಿ | ದಿನಾಂಕ: 16-04-2012 ರಂದು ಬೆಳಿಗ್ಗೆ 10.30ಕ್ಕೆ |
| 9 | ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮತ್ತು ಓ.ಎಂ.ಆರ್. ತುಂಬುವುದು. | ಡಯಟ್ ಪ್ರಾಂಶುಪಾಲರ ನೇತೃತ್ವದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು | ದಿನಾಂಕ: 17-04-2012 ರಿಂದ 19-04-2012 |
| 10 | ಭರ್ತಿ ಮಾಡಿದ ಓ.ಎಂ.ಆರ್.ಗಳನ್ನು ಪರಿಶೀಲಿಸಿ ಸಿ.ಎ.ಸಿ.ಗೆ ತಲುಪಿಸುವುದು | ಜಿಲ್ಲಾ ನೋಡಲ್ ಅಧಿಕಾರಿಗಳು | ದಿನಾಂಕ: 21-04-2012 ರಂದು |
| 11 | ಫಲಿತಾಂಶ ಪ್ರಕಟಣೆ ಮತ್ತು ಅರ್ಹತೆಯಧಾರಿತ ಜೇಷ್ಠತಾ ಪಟ್ಟಿ ಪ್ರಕಟಣೆ | ಕೇಂದ್ರೀಯ ದಾಖಲಾತಿ ಘಟಕ ಬೆಂಗಳೂರು | ದಿನಾಂಕ:25-04-2012 |
| 12 | ಶಾಲೆ ಹಾಗೂ ದಾಖಲಾತಿ ಪ್ರಕ್ರಿಯೆ ಪ್ರಾರಂಭ | ಶಾಲಾ ಹಂತದಲ್ಲಿ | ದಿನಾಂಕ: 21-05-2012 ರಿಂದ 10-06-12 ರವರೆಗೆ |
| 13 | ತರಗತಿಗಳ ಪ್ರಾರಂಭ | ಶಾಲಾ ಹಂತದಲ್ಲಿ | ದಿನಾಂಕ: 11-06-2012 ರಿಂದ |

| | | |
|---|---|---|
| 13 | ಮೌಲ್ಯ ಮಾಪಕರಿಗೆ (ಒಬ್ಬರು ಒಂದು ದಿನಕ್ಕೆ ಕನಿಷ್ಠ 60 ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಬೇಕು | ಒಬ್ಬರಿಗೆ ಒಂದು ದಿನಕ್ಕೆ ರೂ 120/- |
| 13 | ಮೌಲ್ಯಮಾಪನ ಸಹಾಯಕ ಅಧಿಕಾರಿಗಳಿಗೆ | 200/- |
| 14 | ಮೌಲ್ಯಮಾಪನ ಸಾದಿಲ್ವಾರು | 500/- |

**16. ದಾಖಲಾತಿ ಪ್ರಕ್ರಿಯೆ :** ಪ್ರವೇಶ ಪರೀಕ್ಷೆಯ ಫಲಿತಾಂಶ ಮತ್ತು ಅರ್ಹತೆಯಾಧಾರಿತ (ರಾಜ್ಯ ರೋಸ್ಟರ್ ಅನ್ವಯ) ಜೇಷ್ಠತಾ ಪಟ್ಟಿಯಗಳನ್ನು ಸಿ.ಎ.ಸಿ. ಯವರು ಆಯಾ ಬ್ಲಾಕ್ ವಾರು ಸಿದ್ಧಪಡಿಸಿ ದಿನಾಂಕ: 25-04-12 ರಂದು Selection list Eligibility list ಗಳನ್ನು ಆಯಾ ಬ್ಲಾಕ್‌ಗಳಿಗೆ ನೀಡುವರು ಇದರ ಆಧಾರದ ಮೇಲೆ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ದಾಖಲಾತಿಗೆ ಅರ್ಹತೆ ಪಡೆದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ 6ನೇ ತರಗತಿಗೆ ದಾಖಲು ಮಾಡಿಕೊಳ್ಳುವುದು. ಈ ಬಗ್ಗೆ ರಾಜ್ಯ ಕಛೇರಿಯಿಂದ ನೀಡಲಾಗುವ ಸೂಚನೆಗಳನ್ನು ಅನುಸರಿಸುವುದು. ದಿನಾಂಕ:28-05-12 ರಿಂದ 10-06-2012 ರವರೆಗೆ ಆದರ್ಶ ವಿದ್ಯಾಲಯಗಳಲ್ಲಿ ದಾಖಲಾತಿ ಪ್ರಕ್ರಿಯೆ ನಡೆಸುವುದು. ದಿನಾಂಕ: 11-06-2012 ರಿಂದ ತರಗತಿಗಳನ್ನು ಪ್ರಾರಂಭಿಸುವುದು.

ಮೇಲಿನ ಮಾರ್ಗಸೂಚಿಯನ್ನು ಅನುಸರಿಸಿ ಬ್ಲಾಕ್ ಮತ್ತು ಜಿಲ್ಲಾ ಹಂತದ ಅಧಿಕಾರಿಗಳು ಪ್ರವೇಶ ಪರೀಕ್ಷೆ ಪ್ರಕ್ರಿಯೆ, ಮೌಲ್ಯಮಾಪನ ಪ್ರಕ್ರಿಯೆ ಮತ್ತು ದಾಖಲಾತಿ ಪ್ರಕ್ರಿಯೆಗಳನ್ನು ಯಾವುದೇ ಲೋಪವಿಲ್ಲದೆ ನಡೆಸುವುದು. ಯಾವುದೇ ಸಂದೇಹ, ಸಮಸ್ಯೆಗಳ ಪರಿಹಾರಕ್ಕಾಗಿ ಈ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸುವುದು.

1. **ಶ್ರೀ, ಬಿ.ಸಿ. ಬಸವರಾಜಪ್ಪ, ಹಿ.ಕಾ.ಅ. ಆರ್.ಎಂ.ಎಸ್.ಎ. ದೂರವಾಣಿ ಸಂಖ್ಯೆ: 9480695477**
2. **ಶ್ರೀಮತಿ, ಮಧುಮಾಲತಿ ಪಡುವಣಿ ಕಿ.ಕಾ.ಅ. ಆರ್.ಎಂ.ಎಸ್.ಎ. ದೂರವಾಣಿ ಸಂಖ್ಯೆ: 9449874382**

ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ,
ಬೆಂಗಳೂರು

ಗೌರವ ಪೂರ್ವಕವಾಗಿ ಮಾಹಿತಿಗಾಗಿ ಪ್ರತಿಯನ್ನು,

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಆರ್.ಎಂ.ಎಸ್.ಎ.
3. ಅಪರ ಆಯುಕ್ತರು, ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯ

ಪ್ರತಿಯನ್ನು

1. ನಿರ್ದೇಶಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಇವರಿಗೆ ಮಾಹಿತಿಗಾಗಿ
2. ನಿರ್ದೇಶಕರುಗಳು, ಎಲ್ಲಾ ಅಪರ ಆಯುಕ್ತರ ಕಛೇರಿಗಳು, ಮಾಹಿತಿಗಾಗಿ
3. ಜಂಟಿ ನಿರ್ದೇಶಕರುಗಳು, ಎಲ್ಲಾ ಅಪರ ಆಯುಕ್ತರ ಕಛೇರಿಗಳು
4. ವಿಶೇಷಾಧಿಕಾರಿಗಳು, ಕೇಂದ್ರೀಯ ದಾಖಲಾತಿ ಘಟಕ, ಬೆಂಗಳೂರು ರವರಿಗೆ ಕ್ರಮಕ್ಕೆ
5. ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ), ಕ್ರಮಕ್ಕಾಗಿ
6. ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ), ಕ್ರಮಕ್ಕಾಗಿ
7. ಸಂಬಂಧಿಸಿದ ಜಿಲ್ಲಾ ಉಪಸಮನ್ವಯಾಧಿಕಾರಿಗಳು, ಆರ್.ಎಂ.ಎಸ್.ಎ. ಇವರಿಗೆ ತಕ್ಷಣದ ಕ್ರಮಕ್ಕಾಗಿ,
8. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಕ್ರಮಕ್ಕಾಗಿ
9. ಕಛೇರಿ ಪ್ರತಿ

- ದಿನಾಂಕ: 17-04-12 ಮತ್ತು 19-04-12 ರಂದು (ಎರಡು ದಿನಗಳು) ಮೌಲ್ಯಮಾಪನ ಕಾರ್ಯ ಮತ್ತು ಓ.ಎಂ.ಆರ್. ತುಂಬಿಸುವ ಕಾರ್ಯ ಮುಗಿಸುವುದು.
- ಸ್ಥಳೀಯ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮೌಲ್ಯಮಾಪಕರಾಗಿ ಆಯ್ಕೆ ಮಾಡುವುದು. ಪ್ರತಿ ಮೌಲ್ಯಮಾಪಕರು ದಿನವೊಂದಕ್ಕೆ ಕನಿಷ್ಠ 60 ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಓ.ಎಂ.ಆರ್. ತುಂಬಿಸಲು ಬೇಕಾಗುವಷ್ಟು ಸಂಖ್ಯೆ ಮೌಲ್ಯ ಮಾಪಕರನ್ನು ನೇಮಕ ಮಾಡಿಕೊಳ್ಳುವುದು.
- ಮೌಲ್ಯಮಾಪನ ಮಾಡಲು ಪ್ರತಿ 6 ಜನರ ತಂಡಕ್ಕೆ ಒಬ್ಬರನ್ನು ಮುಖ್ಯಸ್ಥರನ್ನಾಗಿ/ ಪರಿಶೀಲಕರಾಗಿ ನೇಮಿಸಿಕೊಳ್ಳುವುದು. ಮೌಲ್ಯಮಾಪನ ಮಾಡಿದವರೇ ಓ.ಎಂ.ಆರ್. ಗಳನ್ನು ತುಂಬಬೇಕು. ತಂಡದ ಪ್ರತಿಯೊಬ್ಬರು ಸಹಿ ಮಾಡಿರಬೇಕು.
- ಪ್ರತಿ ಮೌಲ್ಯಮಾಪಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳ ವಿವರವನ್ನು ಡಯಟ್ ನೋಡಲ್ ಅಧಿಕಾರಿಗಳು ನಿರ್ವಹಿಸಬೇಕು. ಪ್ರತಿಯೊಬ್ಬರಿಗೂ ಒಂದು ಕೋಡ್ ಸಂಖ್ಯೆ ನೀಡಿ ಅದನ್ನು ಉತ್ತರ ಪತ್ರಿಕೆ ಮತ್ತು ಓ.ಎಂ.ಆರ್. ಗಳಲ್ಲಿ ಸಹಿಯೊಂದಿಗೆ ನಮೂದಿಸಲು ಸೂಚಿಸುವುದು. ಮೌಲ್ಯಮಾಪನದಲ್ಲಿ ವ್ಯತ್ಯಾಸಗಳು ಕಂಡು ಬಂದರೆ, ತಪ್ಪು ಮಾಡಿದವರನ್ನು ಗುರುತಿಸಲು ಈ ಪ್ರಕ್ರಿಯೆ ಸಹಾಯಕ್ಕೆ ಬರುತ್ತದೆ.
- ಮೌಲ್ಯ ಮಾಪನ ಕಾರ್ಯ ಮುಗಿದ ಮೇಲೆ ಓ.ಎಂ.ಆರ್. ಗಳನ್ನು ಜಿಲ್ಲಾ ನೋಡಲ್ ಅಧಿಕಾರಿಗಳು ಖುದ್ದಾಗಿ ದಿನಾಂಕ: 21-04-12 ರಂದು ಸಿ.ಎ.ಸಿ. ತಲುಪಿಸುವುದು
- ಮೌಲ್ಯೀಕರಿಸಲಾದ ಉತ್ತರ ಪತ್ರಿಕೆಗಳನ್ನು ದಿನಾಂಕ: 21-04-12 ರೊಳಗೆ ರಾಜ್ಯ ಕಛೇರಿ/ ಸಿ.ಎ.ಸಿ. ಗೆ ತಲುಪಿಸುವುದು.

14. **ಅನುದಾನ ಬಿಡುಗಡೆ ಮತ್ತು ಬಳಕೆ :** ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯ ಹಾಗೂ ಉಸ್ತುವಾರಿ ಕಾರ್ಯಗಳ ಸಂಬಂಧ ಪ್ರತಿ ಬ್ಲಾಕಿಗೆ ತಲಾ 10,000 ರೂ.ಗಳನ್ನು ಮುಂಗಡವಾಗಿ ರಾಜ್ಯ ಕಛೇರಿಯಿಂದ ಆಯಾ ಜಿಲ್ಲಾ ಉಪನಿರ್ದೇಶಕರು. (ಆಡಳಿತ) ರವರಿಗೆ ಬಿಡುಗಡೆ ಮಾಡಲಾಗುವುದು. ಈ ಕೆಳಕಂಡ ಮಾರ್ಗ ಸೂಚಿಯನ್ನು ಅನುಸರಿಸಿ ಅನುದಾನವನ್ನು ಖರ್ಚು ಮಾಡಿ ಪರೀಕ್ಷಾ ಕಾರ್ಯ ಮುಗಿದ 15 ದಿನದೊಳಗೆ ಲೆಕ್ಕ ಪತ್ರ ವಿವರದೊಂದಿಗೆ ಬಳಕೆ ಪ್ರಮಾಣ ಪತ್ರವನ್ನು ರಾಜ್ಯ ಕಛೇರಿಗೆ ನೀಡುವುದು.
15. **ಅನುದಾನ ಬಳಕೆಗೆ ಮಾರ್ಗಸೂಚಿ :** ಪರೀಕ್ಷಾ ಪ್ರಕ್ರಿಯೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ಬಳಕೆಗೆ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸುವುದು.

| ಕ್ರ.ಸಂ. | ವಿವರ | ಪರೀಕ್ಷಾ ಸಂಭಾವನೆ ರೂ.ಗಳಲ್ಲಿ |
|---|---|---|
| 1 | ಮುಖ್ಯ ಅಧೀಕ್ಷಕರು | 500 |
| 2 | ಜಿಲ್ಲಾ ನೋಡಲ್ ಅಧಿಕಾರಿಗಳು (ಪರೀಕ್ಷೆ ಮತ್ತು ಮೌಲ್ಯಮಾಪನ ಸೇರಿ) | 500 |
| 3 | ತಾಲ್ಲೂಕು ನೋಡಲ್ ಅಧಿಕಾರಿಗಳು (ಪರೀಕ್ಷೆ ಮತ್ತು ಮೌಲ್ಯಮಾಪನ ಸೇರಿ) | 500 |
| 4 | ಕ್ಷೇತ್ರಶಿಕ್ಷಣಾಧಿಕಾರಿಗಳು | 500 |
| 5 | ಕೊಠಡಿ ಮೇಲ್ವಿಚಾರಕರಿಗೆ | 100 (28 ಅಭ್ಯರ್ಥಿಗಳಿಗೆ ಒಬ್ಬರಂತೆ) |
| 6 | ಜಿಲ್ಲಾ/ ತಾಲ್ಲೂಕು ಖಜಾನಾಧಿಕಾರಿಗಳಿಗೆ | 600 |
| 7 | ಪರೀಕ್ಷಾ ಕೇಂದ್ರದ ಸಹಾಯಕರಿಗೆ | 100 (2 ದಿನಕ್ಕೆ) |
| 8 | ಪರೀಕ್ಷಾ ಕೇಂದ್ರಗಳ 'ಡಿ' ಗ್ರೂಪ್ ನೌಕರರಿಗೆ | 75 (2 ದಿನಕ್ಕೆ) |
| 9 | ವಾಟರ್ ಬಾಯ್ | 50 |
| 10 | ವಾಹನ ಚಾಲಕರಿಗೆ | 75 (2 ದಿನಕ್ಕೆ) |
| 12 | ಸಾದಿಲ್ವಾರು (ಪರೀಕ್ಷಾ ಕಾರ್ಯಕ್ಕೆ) | 150 ಅಭ್ಯರ್ಥಿಗಳ – ರೂ 600/-<br>250 ಅಭ್ಯರ್ಥಿಗಳ –ರೂ 700/-<br>350 ಅಭ್ಯರ್ಥಿಗಳ –ರೂ 800/-<br>351 ಅಭ್ಯರ್ಥಿಗಳಿಗಿಂತ ಹೆಚ್ಚು ಇದ್ದಲ್ಲಿ–ರೂ 900/- |

9. **ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ಕೊಠಡಿ ಮೇಲ್ವಿಚಾರಕರ ಆಯ್ಕೆ** : ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಅಥವಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಿಸುವುದು. (ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿವೇಚನೆಯಂತೆ). ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರನ್ನು ಕೊಠಡಿ ವೀಕ್ಷಕರನ್ನಾಗಿ ನೇಮಿಸುವುದು. ಕನಿಷ್ಠ 28 ಮಕ್ಕಳಿಗೆ ಒಂದು ಕೊಠಡಿಯಂತೆ ವೀಕ್ಷಕರ ಸಂಖ್ಯೆಯನ್ನು ನಿರ್ಧರಿಸುವುದು. ಪರೀಕ್ಷಾ ದಿನದ ಹಿಂದಿನ ದಿನದಂದು ಬಿ.ಇ.ಓ. ಮತ್ತು ಡಯಟ್‌ನ ತಾಲ್ಲೂಕು ನೋಡಲ್ ಅಧಿಕಾರಿಗಳು ಮುಖ್ಯ ಅಧೀಕ್ಷಕರ ಮತ್ತು ಕೊಠಡಿ ವೀಕ್ಷಕರ ಸಭೆ ನಡೆಸಿ ರಾಜ್ಯ ಕಛೇರಿ/ಸಿ.ಎ.ಸಿ.ಯಿಂದ ನೀಡಲಾಗುವ ನಿರ್ದೇಶನಗಳನ್ನು ಪಾಲಿಸಲು ಸೂಚಿಸುವುದು.

10. **ಪರೀಕ್ಷಾ ಕಾರ್ಯದ ಉಸ್ತುವಾರಿ** : ಆಯಾ ಬ್ಲಾಕಿನಲ್ಲಿ ಪ್ರವೇಶ ಪರೀಕ್ಷಾ ಕಾರ್ಯದ ಉಸ್ತುವಾರಿಯನ್ನು ಆಯಾ ಬಿ.ಇ.ಓ. ಮತ್ತು ಈ ಕಾರ್ಯಕ್ಕೆ ನೇಮಕವಾದ ತಾಲ್ಲೂಕು ನೋಡಲ್ ಅಧಿಕಾರಿಗಳು ವಹಿಸಬೇಕು. ಈ ಬಗ್ಗೆ ಡಯಟ್ ಹಂತದ ನೋಡಲ್ ಅಧಿಕಾರಿಗಳು ಆಗಿಂದಾಗ್ಗೆ ಮಾರ್ಗದರ್ಶನ ನೀಡುವುದು. ಪರೀಕ್ಷಾ ಸಮಯದಲ್ಲಿ ಯಾವುದೇ ಅವ್ಯವಹಾರ ನಡೆಯದಂತೆ ನೋಡಿಕೊಳುವುದು. ಆಯಾ ಬ್ಲಾಕ್ ಮತ್ತು ಜಿಲ್ಲಾ ಹಂತದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಪರೀಕ್ಷಾ ದಿನದಂದು ಎಲ್ಲಾ ಹಂತದ ಇಲಾಖಾ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವುದು.

11. **ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳ ನಿರ್ವಹಣೆ** : ಪ್ರಶ್ನೆ ಪತ್ರಿಕೆ ತಯಾರಿಕೆ, ಮುದ್ರಣ, ವಿತರಣೆ, ಗೌಪ್ಯತೆ, ಕಾಪಾಡುವುದು ಮುಂತಾದ ಕಾರ್ಯಗಳನ್ನು ಬೆಂಗಳೂರಿನ ಕೇಂದ್ರೀಯ ದಾಖಲಾತಿ ಘಟಕಕ್ಕೆ (CAC) ವಹಿಸಲಾಗಿದೆ. ಈ ಕಾರ್ಯಗಳನ್ನು ನಿರ್ವಹಿಸಲು ಸಂಬಂಧಿಸಿದ ಜಿಲ್ಲೆಗಳ ಡಯಟ್ ಹಂತದಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದ್ದು ಇವರುಗಳ ಸಭೆ ನಡೆಸಿ ಮಾರ್ಗದರ್ಶನವನ್ನು ಸಿ.ಎ.ಸಿ. ಯಿಂದ ನೀಡಲಾಗುವುದು. ಪ್ರಶ್ನೆ ಪತ್ರಿಕೆಗಳು ಸಿ.ಎ.ಸಿ. ಯಿಂದ ಜಿಲ್ಲಾ ಹಂತಕ್ಕೆ ಬರುತ್ತವೆ. ಜಿಲ್ಲಾ ಡಯಟ್ ನೋಡಲ್ ಅಧಿಕಾರಿಗಳು ಅವುಗಳನ್ನು ಸ್ವೀಕರಿಸಿ, ಜಿಲ್ಲಾ ಖಜಾನೆಯಲ್ಲಿ ಭದ್ರಪಡಿಸಿಡುವುದು. ಪರೀಕ್ಷಾ ಹಿಂದಿನ ದಿನದಂದು ಸದರಿ ಪ್ರಶ್ನೆ ಪತ್ರಿಕೆಗಳನ್ನು ಬಿ.ಇ.ಓ. ರವರು ತಮ್ಮ ಜವಾಬ್ದಾರಿಯಲ್ಲಿ ತಮ್ಮ ವಾಹನದಲ್ಲಿ ಬ್ಲಾಕ್ ಹಂತಕ್ಕೆ ತಂದು ಬ್ಲಾಕ್ ಖಜಾನೆಯಲ್ಲಿ ಇಡುವುದು. ಪರೀಕ್ಷಾ ದಿನದಂದು ಪರೀಕ್ಷೆ ಸಮಯಕ್ಕೆ ಅರ್ಧ ಗಂಟೆ ಮುಂಚೆ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳ ಬಂಡಲ್ಲುಗಳನ್ನು ತಲುಪಿಸುವುದು. ಮುಖ್ಯ ಅಧೀಕ್ಷಕರು ಬಂಡಲ್ಲುಗಳನ್ನು ಬಿ.ಇ.ಓ. /ನೋಡಲ್ ಅಧಿಕಾರಿಗಳ ಸಮ್ಮುಖದಲ್ಲಿ ಒಡೆದು ಸಹಿ ಪಡೆದು ಕೊಠಡಿವಾರು ವಿಂಗಡಿಸಿ, ಕೊಠಡಿ ಮೇಲ್ವಿಚಾರಕರಿಗೆ ನೀಡುವುದು. ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳ ಸಮ್ಮುಖದಲ್ಲಿ ಪಾಕೆಟ್‌ಗಳನ್ನು ಒಡೆದು ವಿತರಿಸಬೇಕು.

12. **ನಾಮಿನಲ್ ರೋಲ್ ನಿರ್ವಹಣೆ:** ಸಿ.ಎ.ಸಿ. ವತಿಯಿಂದ ನೀಡಲಾಗುವ ಅಭ್ಯರ್ಥಿಗಳ ನಾಮಿನಲ್ ರೋಲ್ ಗಳನ್ನು ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳ ಪರಿಶೀಲನೆಗೆ ಬಳಸುವುದು. ಪ್ರತಿ ಅಭ್ಯರ್ಥಿಯ ಫೋಟೋ ಪರಿಶೀಲಿಸಿ, ಸಹಿ ಪಡೆಯುವುದು. ಗೈರು ಹಾಜರಾದ ಅಭ್ಯರ್ಥಿಗಳ ವಿವರವನ್ನು ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸುವುದು. ಉತ್ತರ ಪತ್ರಿಕೆಗಳನ್ನು ಬಂಡಲ್ ಮಾಡಲು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುಸರಿಸುವ ವಿಧಾನ ಅನುಸರಿಸುವುದು. 20 ಪತ್ರಿಕೆಗಳಿಗೆ ಒಂದು ಪ್ಯಾಕೇಟ್ ಮಾಡುವುದು. ಪರೀಕ್ಷೆ ಮುಗಿದ ಮೇಲೆ ಉತ್ತರ ಪತ್ರಿಕೆಗಳ ಜೊತೆಯಲ್ಲಿ ನಾಮಿನಲ್ ರೋಲ್ ಮತ್ತು ಗೈರು ಹಾಜರಿ ತಃಖ್ತೆಗಳನ್ನು ಆಯಾ ಜಿಲ್ಲೆಯ ಡಯಟ್‌ಗೆ ತಲುಪಿಸುವುದು. ಉಪನಿರ್ದೇಶಕರು (ಅಭಿವೃದ್ಧಿ)ರವರು ಸ್ವೀಕೃತಿ ಮತ್ತು ಸುರಕ್ಷತೆಗಾಇ ಸೂಕ್ತ ಕ್ರಮ ವಹಿಸುವುದು.

13. **ಮೌಲ್ಯ ಮಾಪನ ಮತ್ತು ಓ.ಎಂ.ಆರ್. ತುಂಬುವ ಕಾರ್ಯ** : ಜಿಲ್ಲಾ ಡಯಟ್ ಹಂತದಲ್ಲಿ ಈ ಕಾರ್ಯ ನಡೆಯಬೇಕು. ಜಿಲ್ಲಾ ನೋಡಲ್ ಅಧಿಕಾರಿಗಳು /ಡಯಟ್ ಪ್ರಾಂಶುಪಾಲರು ಮೌಲ್ಯಮಾಪನ ಕೇಂದ್ರಗಳ ರಚನೆ ಮೌಲ್ಯ ಮಾಪಕರ ಆಯ್ಕೆ, ಓ.ಎಂ.ಆರ್. ತುಂಬಿಸುವ ಕಾರ್ಯಗಳನ್ನು ನಿರ್ವಹಿಸುವುದು. ಈ ಕೆಳಗಿನಂತೆ ಕ್ರಮ ವಹಿಸುವುದು.

5. ತಾಲ್ಲೂಕು ಹಂತದಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಹಾಗೂ ಗಣಕೀಕರಿಸಲು ಅನುಸರಿಸಬೇಕಾದ ಕ್ರಮಗಳು:

- ಅರ್ಜಿ ವಿತರಣೆ ಪ್ರಾರಂಭಿಸಿದ ದಿನದಿಂದ ದಿನಾಂಕ:26-03-2012 ರವರೆಗೆ ಆಯಾ ದಿನದಂದು ಸ್ವೀಕರಿಸಲಾದ ಭರ್ತಿ ಮಾಡಿದ ಅರ್ಜಿಗಳನ್ನು ಅದೇ ದಿನದಂದು ರಾಜ್ಯ ಕಛೇರಿಯಿಂದ ನೀಡಲಾದ ಸಾಫ್ಟ್ ವೇರ್ ಬಳಸಿ ಗಣಕೀಕರಿಸುವುದು. ಈ ಕಾರ್ಯವನ್ನು ಡೇಟಾ ಎಂಟ್ರಿ ಅಪರೇಟರ್ ಗಳ ಸಹಕಾರದಿಂದ ಮಾಡಿಸುವುದು. ಈ ಕಾರ್ಯಕ್ಕೆ ಕೆಳಗಿನ ಕ್ರಮವನ್ನು ಅನುಸರಿಸುವುದು.
- ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಸಮಯದಲ್ಲಿ ಅರ್ಜಿಯ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿರುವ ಬಗ್ಗೆ ಪರಿಶೀಲಿಸಬೇಕು. ಅರ್ಜಿ ಮತ್ತು ಪ್ರವೇಶ ಪತ್ರಗಳಲ್ಲಿ ಒಂದೇ ತರಹದ ಫೋಟೋ ಅಂಟಿಸಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.
- ಜಿಲ್ಲಾ ಕೋಡ್ ಮತ್ತು ಬ್ಲಾಕ್ ಕೋಡ್‌ಗಳನ್ನು ರಾಜ್ಯ ಕಛೇರಿಯಿಂದಲೇ ನೀಡಲಾಗಿದೆ. ಅರ್ಜಿ ಸ್ವೀಕರಿಸುವವರು ಅರ್ಜಿ ಮತ್ತು ಪ್ರವೇಶ ಪತ್ರಗಳಲ್ಲಿ ಸದರಿ ಕೋಡ್ ಗಳನ್ನು ನಮೂದಿಸಬೇಕು.
- ಅಭ್ಯರ್ಥಿ ನೋಂದಣಿ ಸಂಖ್ಯೆಯು ಈ ಕೆಳಗಿನಂತೆ 9 ಅಂಕೆಗಳನ್ನು ಹೊಂದಿರುತ್ತದೆ. ನೋಂದಣಿ ಸಂಖ್ಯೆಯನ್ನು ಬ್ಲಾಕ್ ನೋಡಲ್ ಅಧಿಕಾರಿಗಳು ಅರ್ಜಿ ಪಡೆದ ತಕ್ಷಣವೇ ಅಭ್ಯರ್ಥಿಗಳಿಗೆ ನೀಡಬೇಕು.
- ಅಭ್ಯರ್ಥಿಗೆ 11 ಅಂಕಿಯ ನೋಂದಣಿ ಸಂಖ್ಯೆಯನ್ನು ಈ ಕೆಳಗಿನಂತೆ ನೀಡುವುದು.
  ವರ್ಷ- 12- ಎರಡು ಅಂಕಿಗಳು (ಇದನ್ನು ಅರ್ಜಿಯಲ್ಲಿ ಮೊದಲೇ ಮುದ್ರಿಸಲಾಗಿರುತ್ತದೆ.
  ಜಿಲ್ಲಾ ಕೋಡ್ -ಎರಡು ಅಂಕಿಗಳು
  ಬ್ಲಾಕ್ ಕೋಡ್ –ಎರಡು ಅಂಕಿಗಳು
  ಅರ್ಜಿಯ ಅನುಕ್ರಮಣಿಕೆ ಸಂಖ್ಯೆ-ಮೂರು ಅಂಕಿಗಳು
  ಉದಾಹರಣೆ: ಒಂಭತ್ತು ಅಂಕಿಗಳ ಮಾದರಿ ಈ ಮುಂದಿನಂತೆ.

| ವರ್ಷ | | ಜಿಲ್ಲೆ | | ತಾಲ್ಲೂಕು | | ಅರ್ಜಿ ಅನುಕ್ರಮಣಿಕೆ ಸಂಖ್ಯೆ | | |
|---|---|---|---|---|---|---|---|---|
| 1 | 2 | 0 | 1 | 0 | 1 | 0 | 0 | 1 |

ಈ ಉದಾಹರಣೆಯಲ್ಲಿ ನೋಂದಣಿ ಸಂಖ್ಯೆ 120101001 ಆಗಿರುತ್ತದೆ.

- ಅರ್ಜಿಯ ಕ್ರಮಸಂಖ್ಯೆಯನ್ನು 001 ರಿಂದ ಪ್ರಾರಂಭಿಸಿ ಆಯಾ ದಿನದಂದು ಸ್ವೀಕರಿಸಿದ ಅರ್ಜಿಗಳನುಸಾರ ನೀಡುವುದು. ಕೊನೆ ದಿನಾಂಕದವರೆಗೆ ಈ ಸಂಖ್ಯೆಯನ್ನು ಮುಂದುವರೆಸುವುದು. ಕೊನೆಯ ದಿನಾಂಕದಂದು ನೀಡಲಾದ ಕ್ರಮಸಂಖ್ಯೆಯು ಆಯಾ ಬ್ಲಾಕಿನ ಒಟ್ಟು ಅರ್ಜಿಗಳ ಸಂಖ್ಯೆಯನ್ನು ಸೂಚಿಸುತ್ತದೆ.
- ಬಿ.ಇ.ಓ. ರವರು ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಕನಿಷ್ಠ 250-300 ಮಕ್ಕಳಿಗೆ ಒಂದರಂತೆ ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು. ಒಂದು ವೇಳೆ ಅರ್ಜಿಗಳ ಸಂಖ್ಯೆ 300 ಮೀರಿದರೆ ಇನ್ನೊಂದು ಪರೀಕ್ಷಾ ಕೇಂದ್ರವನ್ನು ಗುರ್ತಿಸಿ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ನೀಡುವಾಗ ಪರೀಕ್ಷಾ ಕೇಂದ್ರದ ವಿಳಾಸವನ್ನು ನಮೂದಿಸಿ ನೀಡಬೇಕು. ಕೊನೆಯ ದಿನಾಂಕಕ್ಕೆ ಅರ್ಜಿಗಳ ಸಂಖ್ಯೆ 400 ಮೀರದಿದ್ದಲ್ಲಿ ಒಂದೇ ಕೇಂದ್ರದಲ್ಲಿ ಪರೀಕ್ಷೆ ನಡೆಸಲು ಯೋಜಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಈ ಮಾಹಿತಿ ನೀಡುವುದು.

- ಅರ್ಜಿಯನ್ನು ಸ್ವೀಕರಿಸಿದ ಕೂಡಲೇ ಪ್ರವೇಶ ಪತ್ರವನ್ನು ವಿತರಿಸುವುದು. ಅಭ್ಯರ್ಥಿಗಳು ಪರೀಕ್ಷಾ ದಿನದಂದು ಪ್ರವೇಶ ಪತ್ರ ತರಬೇಕು. ಒಂದು ವೇಳೆ ಪ್ರವೇಶ ಪತ್ರ ಕಳೆದುಕೊಂಡಿದ್ದರೆ, ಮೂಲ ಅರ್ಜಿಯನ್ನು ಆಧರಿಸಿ ಪೋಟೋ ಪರಿಶೀಲಿಸಿ ದ್ವಿತೀಯ ಪ್ರತಿ ವಿತರಿಸಬಹುದು.

6. ಅರ್ಜಿಗಳ ಸ್ವೀಕೃತಿ ವಹಿ ನಿರ್ವಹಣೆ ಮತ್ತು ಗಣಕೀಕರಣ: ಬ್ಲಾಕ್ ಹಂತದಲ್ಲಿ ಆಯಾ ದಿನದಂದು ಸ್ವೀಕರಿಸಲಾದ ಅರ್ಜಿಗಳನ್ನು ಈ ಕೆಳಗಿನ ವಿವರದಂತೆ ವಹಿಯಲ್ಲಿ ನಿರ್ವಹಿಸುವುದು.

ಜಿಲ್ಲೆ ಹೆಸರು : ___________ ಬ್ಲಾಕಿನ ಹೆಸರು : ___________

ಜಿಲ್ಲಾ ಕೋಡ್: ___________ ಬ್ಲಾಕ್ ಕೋಡ್ : ___________

| ಕ್ರ.ಸಂ. | ಅಭ್ಯರ್ಥಿಯ ಹೆಸರು | ನೀಡಲಾದ ನೋಂದಣಿ ಸಂಖ್ಯೆ | ಅರ್ಜಿ ಸ್ವೀಕರಿಸಿದ ದಿನಾಂಕ | ಸಹಿ |
|---|---|---|---|---|
| | | | | |

ಅರ್ಜಿಯಲ್ಲಿನ ವಿವರಗಳನ್ನೊಳಗೊಂಡ ಸಾಫ್ಟ್ ವೇರ್ ಅನ್ನು ರಾಜ್ಯ ಕಛೇರಿಯಿಂದ ಸಿದ್ಧಪಡಿಸಿ ನೀಡಲಾಗುವುದು. ಸದರಿ ಸಾಫ್ಟ್ ವೇರ್ ಬಳಸಿ ಬ್ಲಾಕ್ ಹಂತದಲ್ಲಿ ಆಯಾ ದಿನದ ಅರ್ಜಿಗಳನ್ನು ಅದೇ ದಿನದಂದು ಡೇಟಾ ಎಂಟ್ರಿ ಮಾಡಿಸುವುದು. ಸದರಿ ಕಾರ್ಯಕ್ಕೆ ಬ್ಲಾಕ್ ಹಂತದಲ್ಲಿ ಲಭ್ಯವಿರುವ ಡೇಟಾ ಎಂಟ್ರಿ ಅಪರೇಟರ್‌ಗಳ ಸಹಕಾರ ಪಡೆಯುವುದು. ಯಾವುದೇ ಅರ್ಜಿ ಅಥವಾ ಅರ್ಜಿಯಲ್ಲಿನ ಯಾವುದೇ ವಿವರ ಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸುವುದು. ಕೊನೆ ದಿನದಂದು ಗಣಕೀಕರಣಗೊಂಡ ಅರ್ಜಿಗಳ ರಿಪೋರ್ಟ್ ತೆಗೆದು ಅರ್ಜಿ ಸ್ವೀಕರಣಾ ವಹಿಯೊಂದಿಗೆ ಪರಿಶೀಲಿಸಿ ಅದರ ಸಾಫ್ಟ್ ಕಾಪಿಯನ್ನು ದಿನಾಂಕ:28-03-2012 ರಂದು ಜಿಲ್ಲಾ ಹಂತಕ್ಕೆ (ಡಿ.ವೈ.ಪಿ.ಸಿ.ಗಳಿಗೆ) ನೀಡುವುದು.

ಡಿ.ವೈ.ಪಿ.ಸಿಗಳು ಜಿಲ್ಲಾ ಹಂತದಲ್ಲಿ ಎಸ್.ಎಸ್.ಎ ಕಂಪ್ಯೂಟರ್ ಪ್ರೋಗ್ರಾಮರ್ ಗಳ ಸಹಕಾರದಿಂದ ಡೇಟಾ ಪರಿಶೀಲಿಸಿ 30-03-2012 ರಂದು ಖುದ್ದಾಗಿ ರಾಜ್ಯ ಕಛೇರಿ/ಸಿ.ಎ.ಸಿ.ಗೆ ತಲುಪಿಸುವುದು. ಆರ್.ಎಂ.ಎಸ್.ಎ. ಇ-ಮೇಲ್ ಐಡಿ rmsakar@gmail.com ಮೂಲಕವೂ ಡೇಟಾವನ್ನು ಝಿಪ್ ಮಾಡಿ ಕಳುಹಿಸಬಹುದು.

7. ಅರ್ಜಿ ಸ್ವೀಕೃತಿ ಸ್ಥಳದಲ್ಲಿ ಈ ಕೆಳಗಿನ ಮಾಹಿತಿಯನ್ನು ಪ್ರಕಟಿಸುವುದು.

- ಆಯ್ಕೆ ಪರೀಕ್ಷೆಗೆ 5ನೇ ತರಗತಿ ಪಠ್ಯ ಪುಸ್ತಕ ಆಧರಿಸಿ ಆಂಗ್ಲ ಭಾಷೆ (20%), ಗಣಿತ(20%), ವಿಜ್ಞಾನ (20%), ಸಮಾಜ ವಿಜ್ಞಾನ(20%), ಮತ್ತು ಸಾಮಾನ್ಯ ಜ್ಞಾನ (ಜನರಲ್ ನಾಲೇಜ್) (20%) ಇವುಗಳನ್ನು ಪರಿಗಣಿಸಲಾಗುವುದು. ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ (ಆಬಕ್ಟೀವ್ ಟೈಪ್) ಪ್ರಶ್ನೆಗಳನ್ನು ಹೊಂದಿದ್ದು, ಆಂಗ್ಲ ಮತ್ತು ಕನ್ನಡ ಮಾಧ್ಯಮಗಳಲ್ಲಿರುತ್ತವೆ. ಪರೀಕ್ಷೆಗೆ ಒಂದೇ ಪ್ರಶ್ನೆ ಪತ್ರಿಕೆ ಇದ್ದು 100 ಪ್ರಶ್ನೆಗಳಿರುತ್ತವೆ. ಪರೀಕ್ಷೆ ಅವಧಿ 2 ಘಂಟೆ. ಪರೀಕ್ಷಾ ದಿನಾಂಕ 15 ಏಪ್ರಿಲ್ 2012, ಭಾನುವಾರ ಬೆಳಿಗ್ಗೆ10:30 ರಿಂದ ಮಧ್ಯಾಹ್ನ 12.30 ರವರೆಗೆ. ಆಯ್ಕೆ ಪರೀಕ್ಷೆಗೆ ಪೂರಕವಾದ ಪ್ರಶ್ನೆ ಪತ್ರಿಕೆಗಳ ಮಾದರಿಗಳನ್ನು ವೆಬ್ ಸೈಟ್ ನಲ್ಲಿ ಪಡೆದುಕೊಳ್ಳಲು ಅವಕಾಶವಿದೆ.

8. ಪರೀಕ್ಷಾ ಕೇಂದ್ರಗಳ ಸ್ಥಾಪನೆ : ಆಯಾ ಬ್ಲಾಕ್‌ಗಳಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆಗನುಗುಣವಾಗಿ ಪ್ರತಿ ಕೇಂದ್ರಕ್ಕೆ ಕನಿಷ್ಠ 250 ರಿಂದ 300 ಅಭ್ಯರ್ಥಿಗಳಿಗೆ ಒಂದರಂತೆ ಗರಿಷ್ಠ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಶಾಲೆಯನ್ನು ಕೇಂದ್ರವನ್ನಾಗಿ ಆಯ್ಕೆ ಮಾಡುವುದು. ಅರ್ಜಿ ಪಡೆದು ಪ್ರವೇಶ ಪತ್ರವನ್ನು ಅಭ್ಯರ್ಥಿಗಳಿಗೆ ನೀಡುವಾಗ ಕೇಂದ್ರದ ವಿಳಾಸವನ್ನು ನಮೂದಿಸಿ ನೀಡುವುದು. ಸದರಿ ಕೇಂದ್ರಗಳು ಬ್ಲಾಕ್ ಕೇಂದ್ರಗಳಿದ್ದು ಬಸ್ ನಿಲ್ದಾಣಕ್ಕೆ ಸಮೀಪದಲ್ಲಿರಬೇಕು. ಎಸ್.ಎಸ್.ಎಲ್.ಸಿ./ ಪಿ.ಯು.ಸಿ ಪರೀಕ್ಷೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಆ ಪರೀಕ್ಷಾ ಕೇಂದ್ರಗಳನ್ನು ಹೊರತುಪಡಿಸಿ ಬೇರೆ ಕೇಂದ್ರವನ್ನು (ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆ) ಆಯ್ಕೆ ಮಾಡುವುದು.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ : ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು-560 001.

ಅ) ಇಲ್ಲಿ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ

## 2012-13 ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಅರ್ಜಿ

ಆ) ಜಿಲ್ಲೆ ಹೆಸರು: ................ ಇ) ತಾಲ್ಲೂಕಿನ ಹೆಸರು: ................

| ಕಛೇರಿ ಉಪಯೋಗಕ್ಕೆ ಮಾತ್ರ | | | | | | | | | | | | |
|---|---|---|---|---|---|---|---|---|---|---|---|---|
| ವರ್ಷ | 1 | 2 | ಜಿಲ್ಲೆ ಕೋಡ್ | | | ತಾಲ್ಲೂಕು ಕೋಡ್ | | | ಕ್ರಮ ಸಂಖ್ಯೆ | | | |

**ವಿದ್ಯಾರ್ಥಿಗಳು/ಪೋಷಕರು ಭರ್ತಿ ಮಾಡತಕ್ಕದ್ದು**

| | | |
|---|---|---|
| 1 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು (ಪೂರ್ಣಾಕ್ಷರಗಳಲ್ಲಿ) | |
| 2 | ಲಿಂಗ [ ಗಂಡು ] [ ಹೆಣ್ಣು ] | 3) [ ಗ್ರಾಮೀಣ ] [ ನಗರ ] 4) ವಿಕಲಚೇತನರೇ [ ಹೌದು ] [ ಇಲ್ಲ ] |
| 5 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಜನ್ಮ ದಿನಾಂಕ | D D / M M / Y Y Y Y |
| 6 | ವಿದ್ಯಾರ್ಥಿಯ ಜಾತಿ/ಸಾಮಾಜಿಕವರ್ಗ (√ ಚಿಹ್ನೆಯಿಂದ ಗುರುತಿಸಿ) | ಎಸ್.ಸಿ / ಎಸ್.ಟಿ / ಪ್ರ-1 / 2ಎ / 2ಬಿ / 3ಎ / 3ಬಿ / ಸಾಮಾನ್ಯ |
| 7 | ತಾಯಿಯ ಹೆಸರು | |
| 8 | ತಂದೆಯ ಹೆಸರು | |
| 9 | ಪೂರ್ಣ ವಿಳಾಸ ಗ್ರಾಮ/ಪಟ್ಟಣ<br>ಅಂಚೆ<br>ತಾಲ್ಲೂಕು<br>ಜಿಲ್ಲೆ<br>ದೂರವಾಣಿ ಸಂಖ್ಯೆ | |
| 10 | ವಿದ್ಯಾರ್ಥಿ 5ನೇ ತರಗತಿ ಓದುತ್ತಿರುವ ಶಾಲೆಯ ಹೆಸರು ಮತ್ತು ವಿಳಾಸ | |

ಮೇಲ್ಕಂಡ ಎಲ್ಲಾ ಮಾಹಿತಿಗಳು ನಮಗೆ ತಿಳಿದಿರುವ ಮಟ್ಟಿಗೆ ಸರಿಯಾಗಿವೆ ಎಂದು ಈ ಮೂಲಕ ದೃಢೀಕರಿಸಿದೆ.

ವಿದ್ಯಾರ್ಥಿಯ ಸಹಿ | ಮುಖ್ಯ ಶಿಕ್ಷಕರ ಸಹಿ ಮತ್ತು ಮೊಹರು | ತಂದೆ/ತಾಯಿ/ಪೋಷಕರ ಸಹಿ

---------------- ಇಲ್ಲಿ ಕತ್ತರಿಸಿ ----------------

## ಪ್ರವೇಶ ಪತ್ರ

ಇಲ್ಲಿ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ

................ ಎಂಬ ವಿದ್ಯಾರ್ಥಿ/ವಿದ್ಯಾರ್ಥಿನಿಯು ದಿನಾಂಕ: 15.04.2012 ರಂದು ನಡೆಯಲಿರುವ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗಿದೆ.

ನೊಂದಣಿ ಸಂಖ್ಯೆ:

| 1 | 2 | | | | | | | |
|---|---|---|---|---|---|---|---|---|

| ಪರಿಕ್ಷಾ ಸಮಯ | ಬೆಳಿಗ್ಗೆ : 10.30 ರಿಂದ 12.30 ಗಂಟೆಯವರೆಗೆ |
|---|---|

ಪರೀಕ್ಷಾ ಕೇಂದ್ರ :

................................

ವಿದ್ಯಾರ್ಥಿಯ ಸಹಿ | ಕೊಠಡಿ ಮೇಲ್ವಿಚಾರಕರ ಸಹಿ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿ ಮೊಹರಿನೊಂದಿಗೆ

**ಅರ್ಜಿ ತುಂಬಲು ಕಛೇರಿ ಸಿಬ್ಬಂದಿಗಳಿಗೆ/ವಿದ್ಯಾರ್ಥಿಗಳಿಗೆ/ಪೋಷಕರಿಗೆ ಸೂಚನೆಗಳು**

**ಎಲ್ಲಾ ಸೂಚನೆಗಳನ್ನು ಸರಿಯಾಗಿ ಓದಿ ನಂತರ ಅರ್ಜಿಯನ್ನು ತುಂಬುವುದು.**

**ಈ ಪರೀಕ್ಷೆಯು 2012-13 ನೇ ಸಾಲಿಗೆ ನಡೆಯುತ್ತಿರುವುದರಿಂದ ವರ್ಷ 12 ಎಂದು ನಮೂದಿಸಲಾಗಿದೆ. ಜಿಲ್ಲೆಯ ಸಂಕೇತವನ್ನು ತುಂಬಲು ಎರಡು ಖಾಲಿ ಮನೆ ನೀಡಿದ್ದು ಅದರಲ್ಲಿ ನಮೂದಿಸುವುದು. ತಾಲ್ಲೂಕು ಸಂಕೇತವನ್ನು ಸಹ ನೀಡಿದ್ದು ಇದನ್ನು ತುಂಬಲು ಎರಡು ಖಾಲಿ ಮನೆಗಳನ್ನು ನೀಡಿದ್ದು ಅದರಲ್ಲಿ ತುಂಬುವುದು. ವಿದ್ಯಾರ್ಥಿಗಳು ತುಂಬಿದ ಅರ್ಜಿಯನ್ನು ನೀಡಿದಾಗ ಪ್ರತಿ ಅರ್ಜಿ ನಮೂನೆ ಸ್ವೀಕರಿಸುವ ಅನುಕ್ರಮದಲ್ಲಿ ಸಂಖ್ಯೆಯನ್ನು ನೀಡುವುದು. ಇದಕ್ಕಾಗಿ ಮೂರು ಖಾಲಿ ಮನೆಗಳನ್ನು ನೀಡಿದೆ.**

ಅ. ವಿದ್ಯಾರ್ಥಿಯು ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರವನ್ನು ಇದಕ್ಕಾಗಿ ನೀಡಿರುವ ಜಾಗದಲ್ಲಿ ಗಮ್ ಬಳಸಿ ಅಂಟಿಸುವುದು. ಪಿನ್ ಮಾಡಬಾರದು.

ಆ. ರಾಜ್ಯದಲ್ಲಿ 34 ಶೈಕ್ಷಣಿಕ ಜಿಲ್ಲೆಗಳು ಇದ್ದು ನಿಮ್ಮ ಜಿಲ್ಲೆಯ ಹೆಸರನ್ನು ನಮೂದಿಸುವುದು.

ಇ. ರಾಜ್ಯದಲ್ಲಿ 177 ಕಂದಾಯ ತಾಲ್ಲೂಕುಗಳು ಇದ್ದು ನಿಮ್ಮ ತಾಲ್ಲೂಕಿನ ಹೆಸರನ್ನು ನಮೂದಿಸುವುದು.

1) ವಿದ್ಯಾರ್ಥಿಯ ಹೆಸರನ್ನು ಶಾಲೆಯ ದಾಖಲಾತಿಯಲ್ಲಿರುವಂತೆ ಭರ್ತಿ ಮಾಡುವುದು. ಅರ್ಜಿಯನ್ನು ಭರ್ತಿ ಮಾಡಲು ಶಾಲಾ ಮುಖ್ಯೋಪಾಧ್ಯಾಯರ ಸಹಾಯ ಪಡೆಯಬಹುದು.

2) ಗಂಡು ಮತ್ತು ಹೆಣ್ಣು ಎಂದು ಎರಡು ಮನೆಗಳನ್ನು ನೀಡಿದೆ. ವಿದ್ಯಾರ್ಥಿಯು ಯಾವ ಲಿಂಗಕ್ಕೆ ಸೇರಿದ್ದಾರೆಂದು (√) ಹಾಕಿ ಗುರುತು ಮಾಡುವು

3) ಗ್ರಾಮೀಣ ಮತ್ತು ನಗರ ಎಂದು ಎರಡು ಮನೆಗಳನ್ನು ನೀಡಿದೆ. ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಶಾಲೆಯು ಯಾವ ಪ್ರದೇಶಕ್ಕೆ ಸೇರಿದೆ ಎಂಬುದನ್ನು ಪರಿಗಣಿಸಿ (√) ಎಂದು ನಮೂದಿಸುವುದು.

4) ಎರಡು ಮನೆಯನ್ನು ನೀಡಲಾಗಿದ್ದು ವಿದ್ಯಾರ್ಥಿಯು ವಿಕಲಚೇತನರಾಗಿದ್ದಲ್ಲಿ ಹೌದಾದಲ್ಲಿ (√ ) ಎಂದು ಇಲ್ಲವಾದಲ್ಲಿ ( x) ಎಂದು ತುಂಬುವುದು.

5) ಜನ್ಮ ದಿನಾಂಕವನ್ನು ತುಂಬಲು ಎಂಟು ಮನೆಗಳನ್ನು ನೀಡಿದೆ. ಶಾಲೆಯ ದಾಖಲಾತಿ ಪುಸ್ತಕದಲ್ಲಿರುವಂತೆ DD MM YYYY ಮಾದರಿಯಲ್ಲಿ ತುಂಬುವುದು. ಎಂಟು ಮನೆಗಳನ್ನು ನೀಡಿದೆ

6) ಸಾಮಾಜಿಕ ವರ್ಗವನ್ನು ದಾಖಲೆಯ ಆಧಾರದ ಮೇಲೆ ತುಂಬುವುದು. ಅರ್ಜಿಯೊಂದಿಗೆ ಯಾವುದೇ ದಾಖಲೆಗಳನ್ನು ನೀಡುವ ಅವಶ್ಯಕತೆ ಇಲ್ಲ. ಆಯ್ಕೆಗೊಂಡ ಅಭ್ಯರ್ಥಿಗಳು ಶಾಲೆಗೆ ದಾಖಲಾತಿ ಪಡೆಯುವ ಸಮಯದಲ್ಲಿ ಮೂಲದಾಖಲೆಗಳನ್ನು ಒದಗಿಸುವುದು.

7) ಶಾಲಾ ದಾಖಲಾತಿ ಪುಸ್ತಕದಲ್ಲಿರುವಂತೆ ತಾಯಿ ಹೆಸರನ್ನು ತುಂಬುವುದು.

8) ಶಾಲಾ ದಾಖಲಾತಿ ಪುಸ್ತಕದಲ್ಲಿರುವಂತೆ ತಂದೆ ಹೆಸರನ್ನು ತುಂಬುವುದು.

9) ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯೊಂದಿಗೆ ತುಂಬುವುದು. ಸ್ಥಿರ ದೂರವಾಣಿಯಾದಲ್ಲಿ STD ಕೋಡ್ ನೊಂದಿ ನಮೂದಿಸುವುದು.

10) 5 ನೇ ತರಗತಿ ಓದುತ್ತಿರುವ ಶಾಲೆಯ ವಿಳಾಸ, ಗ್ರಾಮ/ ಜನವಸತಿ ಪ್ರದೇಶ, ತಾಲ್ಲೂಕು ಹಾಗೂ ಜಿಲ್ಲೆಯ ಹೆಸರನ್ನು ತುಂಬುವುದು. ವಿದ್ಯಾರ್ಥಿಯು ವ್ಯಾಸಂಗ ಮಾಡಿರುವ ತಾಲ್ಲೂಕು ಹಾಗೂ ಆದರ್ಶ ವಿದ್ಯಾಲಯ ಇರುವ ತಾಲ್ಲುಕು ಬೇರೆಯಾಗಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

**ಸಾಮಾನ್ಯ ಸೂಚನೆಗಳು:**

- ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಅರ್ಜಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ/ಆಯಾ ಬ್ಲಾಕಿನ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಂದ ಉಚಿತವಾಗಿ ಪಡೆಯುವುದು. ಆಯ್ಕೆ ಪರೀಕ್ಷೆಯಲ್ಲಿ ಭಾಗವಹಿಸಲು ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿರುವುದಿಲ್ಲ.
- ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:26.03.2012 ನಿಗದಿತ ದಿನಾಂಕದ ನಂತರ ಬಂದ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಆಯ್ಕೆ ಪರೀಕ್ಷೆ ನಡೆಯುವ ದಿನಾಂಕ: 15.04.2012 ರಂದು ಬೆಳ್ಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ.
- ಆಯ್ಕೆ ಪರೀಕ್ಷೆಗೆ 3 ರಿಂದ 5 ನೇ ತರತಿ ಪಠ್ಯವಸ್ತು(Syllabus) ಆಧರಿಸಿ ಆಂಗ್ಲಭಾಷೆ,ಗಣಿತ,ವಿಜ್ಞಾನ ಸಮಾಜ ವಿಜ್ಞಾನ ಮತ್ತು ಸಾಮಾನ್ಯ ವಿಜ್ಞಾನ ಆಧರಿಸಿದ ವಸ್ತುನಿಷ್ಠ ಪ್ರಶ್ನೆಗಳಿರುತ್ತವೆ. ಹಾಗೂ ಪ್ರಶ್ನೆಪತ್ರಿಕೆ ಆಂಗ್ಲ ಹಾಗೂ ಕನ್ನಡ ಮಾಧ್ಯಮದಲ್ಲಿರುತ್ತದೆ
- ಆಯ್ಕೆ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನಾಧರಿಸಿ ರಾಜ್ಯದ ರೋಸ್ಟರ್ ನಿಯಮಾನುಸಾರ ತಾಲ್ಲೂಕು ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಹಾಗೂ ಪ್ರತಿ ಶಾಲೆಗೆ 80 ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುವುದು.
- ಆದರ್ಶ ವಿದ್ಯಾಲಯಗಳಿಗೆ ದಾಖಲಾತಿಯು ಆಯಾ ತಾಲೂಕಿನ ಮಕ್ಕಳಿಗೆ ಮಾತ್ರ ಅರ್ಹತೆ.
- ಸರ್ಕಾರಿ,ಅನುದಾನಿತ,ಅನುದಾನರಹಿತ ಶಾಲೆಯ ವಿದ್ಯಾರ್ಥಿಗಳು ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
- ಅರ್ಜಿಯನ್ನು www.ssakarnataka.gov.in ಹಾಗೂ www.schooleducation.kar.nic.in ನಲ್ಲಿ download ಮಾಡಿಕೊಳ್ಳಬಹುದು ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ(ಬಿ.ಇ.ಓ.) ಅಥವಾ ಆದರ್ಶ ವಿದ್ಯಾಲಯಗಳಲ್ಲಿ ಪಡೆಯಬಹುದು.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ-ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು-560001

# ಮಾದರಿ ಶಾಲೆಗಳು (ಆದರ್ಶ ವಿದ್ಯಾಲಯ) ಶಾಲಾ ಪರಿಚಯ (ಪ್ರಾಸ್ಪೆಕ್ಟಸ್ )-2012

ಪ್ರೌಢ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಉತ್ತಮ ಗುಣಮಟ್ಟದ ಅವಕಾಶ, ಸೌಕರ್ಯ ಮತ್ತು ಲಭ್ಯತೆಯನ್ನು ಎಲ್ಲಾ ಯುವಜನಾಂಗಕ್ಕೆ ಪೂರೈಸಲು ಸರ್ಕಾರ ಗಳು ಬದ್ಧವಾಗಿವೆ. ಇದಕ್ಕಾಗಿ ಕೇಂದ್ರ ಸರ್ಕಾರವು ದೇಶದಾದ್ಯಂತ ಉತ್ತಮ ಗುಣಮಟ್ಟದ ಶಾಲೆಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ 74 ತಾಲ್ಲೂಕುಗಳಲ್ಲಿ ಮಾದರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಅವುಗಳಿಗೆ ಆದರ್ಶ ವಿದ್ಯಾಲಯ ಎಂದು ಹೆಸರಿಸಲಾಗಿದೆ. ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ವಿದ್ಯಾರ್ಥಿ ಗಳಿಗೆ ಉತ್ತಮ ಗುಣಮಟ್ಟದ ಆಂಗ್ಲಮಾಧ್ಯಮ ಶಿಕ್ಷಣ ಒದಗಿಸುವುದು. ಈ ಪ್ರಯತ್ನದ ಉದ್ದೇಶ.

**ನಮ್ಮ ಕನಸು :-**

''ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ಗುಣಮಟ್ಟದ ಶಿಕ್ಷಣವನ್ನು ನೀಡಿ ಉತ್ಕೃಷ್ಟವಾದ ವೈಯುಕ್ತಿಕ ಮತ್ತು ಶೈಕ್ಷಣಿಕ ಗುರಿಯನ್ನು ಸಾಧಿಸಲು / ತಲುಪಲು ಸಮರ್ಥರನ್ನಾಗಿ ಮಾಡುವುದು ಹಾಗೂ ಈ ಶಾಲೆಯನ್ನು ಅತ್ಯವಶ್ಯ ಮೌಲ್ಯಗಳುಳ್ಳ ಮತ್ತು ಸಾಧಿಸಬಹುದಾದ ಗುರಿಗಳ ಆಧಾರದಲ್ಲಿ ಉತ್ತಮ ಕಲಿಕೆಯ ಕೇಂದ್ರವನ್ನಾಗಿ ಮಾಡುವುದು."

**ನಮ್ಮ ಧ್ಯೇಯ:-**

"ಜಾತಿ, ವರ್ಗ, ಧರ್ಮ, ಇವುಗಳ ಯಾವುದೇ ತಾರತಮ್ಯವಿಲ್ಲದೆ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಿ ಅವರನ್ನು ಜವಾಬ್ದಾರಿಯುಳ್ಳ ಸ್ವಸಾಮರ್ಥ್ಯ ಮತ್ತು ಏಕತೆಯ ಮನೋಭಾವವನ್ನು ಹೊಂದಿದ ಆದರ್ಶ ನಾಗರೀಕರನ್ನಾಗಿ ಮಾಡುವುದು.

## 2012 -13 ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳ ವಿಶೇಷತೆಗಳು:-

- ಆದರ್ಶ ವಿದ್ಯಾಲಯಗಳ ಮೂಲಭೂತ ಸಂರಚನೆಗಳು ಮತ್ತು ಸೌಕರ್ಯಗಳು ಕೇಂದ್ರಿಯ ವಿದ್ಯಾಲಯಗಳ ಮಾದರಿಯಲ್ಲಿರುತ್ತವೆ. ಸೂಕ್ತವಾದ ಪಠ್ಯಕ್ರಮ, ವಿದ್ಯಾರ್ಥಿ/ಶಿಕ್ಷಕರ ಅನುಪಾತ, ಮಾಹಿತಿ, ಸಂವಹನ, ತಂತ್ರಜ್ಞಾನದ ಬಳಕೆ, ಸಂಪೂರ್ಣ ಶೈಕ್ಷಣಿಕ ಪರಿಸರ ಮತ್ತು ವಿದ್ಯಾರ್ಥಿಗಳ ಕಲಿಕೆ (ಔಟ್ ಪುಟ್) ಗಳನ್ನು ಈ ಶಾಲೆಗಳು ಹೊಂದಿರುತ್ತವೆ.
- ಈ ಶಾಲೆಗಳು 2010-11 ನೇ ಸಾಲಿನಿಂದ 6 ನೇ ತರಗತಿ ಮತ್ತು ತಲಾ 2 ವಿಭಾಗಗಳೊಂದಿಗೆ ಆರಂಭವಾಗಿವೆ. ಬೋಧನಾ ಮಾಧ್ಯಮವು ಇಂಗ್ಲೀಷ್ ಆಗಿದ್ದು ರಾಜ್ಯದ ಪಠ್ಯಕ್ರಮ ಅಳವಡಿಸಿದೆ.
- 2012-13 ನೇ ಸಾಲಿನಲ್ಲಿ 6,7 ಮತ್ತು 8 ನೇ ತರಗತಿಗಳು ನಡೆಯಲಿದೆ. 6 ನೇ ತರಗತಿಗೆ ಗರಿಷ್ಠ 80 ಮಕ್ಕಳನ್ನು ದಾಖಲು ಮಾಡುಕೊಳ್ಳಲಾಗುತ್ತದೆ.
- ಆಂಗ್ಲಮಾಧ್ಯಮದಲ್ಲಿ ಬೋಧನೆ ಮಾಡಲು ಸಾಮರ್ಥ್ಯವಿರುವ ಮತ್ತು ಪದವಿ ಹಾಗೂ ಸ್ನಾತಕೋತ್ತರ ಪದವಿ ಯೊಂದಿಗೆ ತರಬೇತಿ ಪಡೆದ ಶಿಕ್ಷಕರನ್ನು ಒದಗಿಸಲಾಗುತ್ತದೆ. ಉತ್ತಮ ಭೌತಿಕ ಸೌಕರ್ಯಗಳಾದ ತರಗತಿ ಕೊಠಡಿಗಳು , ಪ್ರಯೋಗಾಲಯ, ಕಂಪ್ಯೂಟರ್ ಕೊಠಡಿ, ಗ್ರಂಥಾಲಯ, ಶೌಚಾಲಯ, ಆಟದ ಮೈದಾನಗಳನ್ನು ಹೊಂದಿರುವ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದ ಅನುಮೋದನೆ ದೊರತಿದ್ದು, ಶೀಘ್ರವೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.
- ಕನಿಷ್ಠ 5 ಕೊಠಡಿಗಳು. ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ ಮುಂತಾದ ಮೂಲ ಸೌಕರ್ಯ ಇರುವ ಶಾಲೆಯನ್ನು ಆಯ್ದುಕೊಂಡು ಆದರ್ಶ ವಿದ್ಯಾಲಗಳನ್ನು ಆರಂಭಿಸಲಾಗಿದೆ. ಕಾಮಗಾರಿ ಪೂರ್ಣಗೊಳ್ಳುವವರೆಗೆ ಈ ಶಾಲೆಯಲ್ಲಿಯೇ ಅವಶ್ಯಕ ವ್ಯವಸ್ಥೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದು.
- ಸರ್ಕಾರಿ ಶಾಲೆಗಳಿಗೆ ಲಭ್ಯವಿರುವ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಉಪಹಾರ ಇವುಗಳ ಜೊತೆಗೆ ಶಾಲಾ ಡೈರಿ ಮೊದಲಾದ ಸವಲತ್ತುಗಳು ಈ ಶಾಲೆಗಳಲ್ಲಿ ದೊರೆಯುತ್ತದೆ.

- ರಾಜ್ಯದಲ್ಲಿರುವ 202 ಶೈಕ್ಷಣಿಕ ಬ್ಲಾಕ್ ಗಳ ಪೈಕಿ, 74 ಶೈಕ್ಷಣಿಕ ವಾಗಿ ಹಿಂದುಳಿದಿದ್ದು ಅಲ್ಲಿ ಮಾತ್ರ ಆದರ್ಶ ವಿದ್ಯಾಲಯಗಳನ್ನು ಆರಂಭಿಸಲಾಗಿದೆ.
- ಆದರ್ಶ ವಿದ್ಯಾಲಯಗಳಿಗೆ ಸಾಮಾನ್ಯ ಪರೀಕ್ಷೆ ಮೂಲಕ ರಾಜ್ಯದ ರೋಸ್ಟರ್ ನಿಯಮಗಳಿಗೆ ಅನುಗುಣವಾಗಿ ದಾಖಲಾತಿ ಮಾಡಿಕೊಳ್ಳುವುದು. ಆಯ್ಕೆಪರೀಕ್ಷೆ ಆಯಾ ಕೇಂದ್ರದಲ್ಲಿ ನಡೆಯುವುದು. ಆಯಾ ಬ್ಲಾಕ್ ನ ಮಕ್ಕಳಿಗೆ ಮಾತ್ರ ಪ್ರವೇಶ ಪರೀಕ್ಷೆಗೆ ಅವಕಾಶ.

## ಪರೀಕ್ಷಾ ವೇಳಾಪಟ್ಟಿ:-

| | | |
|---|---|---|
| 1 | ಪ್ರಚಾರ ಕಾರ್ಯ (ಬ್ಲಾಕ್ ಹಂತದಲ್ಲಿ) - ನಿರಂತರ ಪ್ರಚಾರ | 12-03-2012 ಇಂದ ಪರೀಕ್ಷೆ ಹಿಂದಿನ ದಿನದವರೆಗೆ |
| 2 | ಪ್ರಚಾರ ಕಾರ್ಯ(ಬ್ಲಾಕ್ ಹಂತದಲ್ಲಿ)- ವಿಶೇಷ ಪ್ರಚಾರ | 12-03-2012 ಇಂದ 24-03-2012 |
| 3 | ಅರ್ಜಿ ವಿತರಣೆ<br>(ಆಯಾ ಆದರ್ಶ ವಿದ್ಯಾಲಯಗಳು/ಬಿಇಓ ಕಛೇರಿಗಳು) | 12-03-2012 ಇಂದ 24-03-2012 |
| 4 | ಭರ್ತಿ ಮಾಡಿದ ಅರ್ಜಿಗಳನ್ನು ಬಿಇಓ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 26-03-2012 ರಂದು ಸಂಜೆ 5 ರವರೆಗ |
| 5 | ಸಾಮಾನ್ಯ ಪ್ರವೇಶ ಪರೀಕ್ಷೆ(ಆಯಾ ಬ್ಲಾಕ್ ಕೇಂದ್ರಗಳಲ್ಲಿ) | 15-04-2012 ರಂದು ಬೆಳಿಗ್ಗೆ 10.30 ರಿಂದ 12.30 |
| 6 | ಉತ್ತರ ಪತ್ರಿಕೆಗಳ ಮೌಲ್ಯಮಾಪನ (ಡಯಟ್ ಹಂತ) | 17-04-2012 ಇಂದ 19-04-2012 |
| 7 | ಫಲಿತಾಂಶ ಪ್ರಕಟಣೆ ಮತ್ತು ಅರ್ಹತೆಯಾಧಾರಿತ ಆಯ್ಕೆಪಟ್ಟಿ ಪ್ರಕಟಣೆ (ರಾಜ್ಯ ಹಂತ) | 25-04-2012 ರಂದು |
| 8 | ದಾಖಲಾತಿ ಪ್ರಕ್ರಿಯೆ (ಶಾಲಾ ಹಂತ) | 21-05-2012 ಇಂದ 10-06-2012 |
| 9 | ಶಾಲೆ ಪ್ರಾರಂಭ | 11-06-2012 ರಂದು |

- ಅರ್ಜಿಗಳನ್ನು ಆಯಾ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಂದ ಅಥವಾ ಆಯಾ ತಾಲ್ಲೂಕಿನ ಬಿಇಓ ಕಛೇರಿಗಳಲ್ಲಿ ಪಡೆಯಬಹುದು. ಈ ಮುಂದೆ ನಮೂದಿಸಿರುವ ವೆಬ್ ಸೈಟ್ ಗಳಿಂದಲೂ ಡೌನ್ ಲೋಡ್ ಮಾಡಿ ಮುದ್ರಿಸಿಕೊಳ್ಳಬಹುದು. www.ssakarnataka.gov.in ಮತ್ತು www.schooleducation.kar.nic.in
- ಆಯಾ ಪರೀಕ್ಷೆಯಲ್ಲಿ 3 ರಿಂದ 5 ನೇ ತರಗತಿ ಪಠ್ಯ ಪುಸ್ತಕ ಆಧರಿಸಿ ಆಂಗ್ಲ ಭಾಷೆ, (20%) ಗಣಿತ (20%) ವಿಜ್ಞಾನ (20%) ಸಮಾಜ ವಿಜ್ಞಾನ (20%) ಮತ್ತು ಸಾಮಾನ್ಯ ಜ್ಞಾನ (20%) ಗಳನ್ನು ಪರಿಗಣಿಸಲಾಗುವುದು.
- ಪ್ರಶ್ನೆಪತ್ರಿಕೆಯ ವಸ್ತುನಿಷ್ಠ(ಅಬ್ಜೆಕ್ಟೀವ್) ಪ್ರಶ್ನೆಗಳನ್ನು ಹೊಂದಿದ್ದು ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿರುತ್ತವೆ.
- ಆಯ್ಕೆ ಪರೀಕ್ಷೆಗೆ ಒಂದೇ ಪ್ರಶ್ನೆಪತ್ರಿಕೆ ಇದ್ದು ಪರೀಕ್ಷೆ ಅವಧಿ 2 ಗಂಟೆ ಆಗಿರುತ್ತದೆ. ಪರೀಕ್ಷಾ ದಿನದಂದು ಬೆಳಗಿನ 10.30 ರಿಂದ 12.30 ರವರೆಗೆ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರ, ಆಯಾ ತಾಲ್ಲೂಕು ಕೇಂದ್ರದಲ್ಲಿ ಇದ್ದು ಕನಿಷ್ಠ 250-300 ಮಕ್ಕಳಿಗೆ ಒಂದು ಕೇಂದ್ರ ಇರುತ್ತದೆ.
- ಆಯ್ಕೆ ಪರೀಕ್ಷೆಗಳಿಗೆ ಪೂರಕವಾದ ವಿವಿಧ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಮಾದರಿಗಳನ್ನು ವೆಬ್ ಸೈಟ್ ನಲ್ಲಿ ಪಡೆದುಕೊಳ್ಳಲು ಅವಕಾಶವಿದೆ.

## RMSA-Karnataka - Model Schools for the year-2012-13

### Model Schools District and Block codes to be used for Applications of Admission Test for the year 2012-13

| Sl. No | District Code | District | Block Code | Block | Sl. NO. | Place |
|---|---|---|---|---|---|---|
| 1 | 01 | Belgaum (South) | 01 | Ramadurg | 1 | Kattagola |
| 2 | | | 02 | Parsgad (Soudatti) | 2 | Ugaragola |
| 3 | 02 | Bagalkote | 01 | Bilagi | 3 | Bilagi |
| 4 | | | 02 | Mudhol | 4 | Mudhol |
| 5 | | | 03 | Bagalkote | 5 | Kadampur |
| 6 | | | 04 | Badami | 6 | Yanakanchi maninagara |
| 7 | | | 05 | Hungund | 7 | Hungunda |
| 8 | | | 06 | JamaKhandi | 8 | Jamkhandi |
| 9 | 03 | Bijapur | 01 | Bijapur | 9 | Bijapur(Rural) |
| 10 | | | 02 | Sindhagi | 10 | Sindhagi |
| 11 | | | 03 | B.Bagewadi | 11 | B.Bagewadi |
| 12 | | | 04 | Muddebihal | 12 | Muddebihal |
| 13 | | | 05 | Indi | 13 | Indi |
| 14 | 04 | Gulbarga | 01 | Aland | 14 | Aland |
| 15 | | | 02 | Afzapur | 15 | Afzapur |
| 16 | | | 03 | Gulbarga | 16 | Gulbarga |
| 17 | | | 04 | Chincholi | 17 | Chincholi |
| 18 | | | 05 | Chitapur | 18 | Chitapur |
| 19 | | | 06 | Jevargi | 19 | Jevargi |
| 20 | | | 07 | Sedam | 20 | Sedam |
| 21 | 05 | Bidar | 01 | Basavakalyan | 21 | Kitta |
| 22 | | | 02 | Bidar | 22 | Bidar |
| 23 | | | 03 | Humnabad | 23 | Hudugi |
| 24 | | | 04 | Aurad | 24 | Aurad |
| 25 | 06 | Raichur | 01 | Lingasur | 25 | Lingasur |
| 26 | | | 02 | Devadurga | 26 | Devadurga |
| 27 | | | 03 | Manvi | 27 | Nir Manvi |
| 28 | | | 04 | Raichur | 28 | Raichur |
| 29 | | | 05 | Sindhanur | 29 | Sindhanur |
| 30 | 07 | Koppal | 01 | Yelburga | 30 | Yelburga |
| 31 | | | 02 | Kustagi | 31 | Hanumasagar |
| 32 | | | 03 | Gangavthi | 32 | Basapatna |
| 33 | | | 04 | Koppal | 33 | Koppal |

| | | | | | | |
|---|---|---|---|---|---|---|
| 34 | 08 | Gadag | 01 | Rona | 34 | Rona |
| 35 | | | 02 | Mundargi | 35 | Mundargi |
| 36 | 09 | Dharawad | 01 | Dharwad | 36 | Alnavar |
| 37 | | | 02 | Kalghatagi | 37 | Gangigatti |
| 38 | 10 | Bellary | 01 | H.Bommanahall | 38 | Bysadgere |
| 39 | | | 02 | Hospet | 39 | Hampi University |
| 40 | | | 03 | Siraguppa | 40 | Siraguppa |
| 41 | | | 04 | Bellary | 41 | Moka |
| 42 | | | 05 | Sandur | 42 | Sandur |
| 43 | | | 06 | Kudiligi | 43 | Kudiligi |
| 44 | 11 | Chitradurga | 01 | Molkalmur | 44 | Molkalmur |
| 45 | | | 02 | Challakere | 45 | Challakere |
| 46 | 12 | Davanagere | 01 | Harapanahalli | 46 | Telagi |
| 47 | 13 | Tumkur (Madhugiri) | 01 | Pavagada | 47 | Pavagada |
| 48 | 14 | Chikkaballapura | 01 | Gudibende | 48 | Gudibende |
| 49 | | | 02 | Bagepalli | 49 | Bagepalli |
| 50 | | | 03 | Chintamani | 50 | Doddaganjuru |
| 51 | | | 04 | Gouribidanur | 51 | Vidhurashwatha |
| 52 | 15 | Kolar | 01 | Srinivaspur | 52 | Srinivaspur |
| 53 | | | 02 | Bangarpet | 53 | Bangarpet |
| 54 | | | 03 | Mulebagilu | 54 | Mulebagilu |
| 55 | 16 | Ramanagar | 01 | Channaptna | 55 | Channaptna |
| 56 | | | 02 | Kanakapura | 56 | Kanakapura |
| 57 | 17 | Hassan | 01 | Holenarasipur | 57 | Halli Mysore |
| 58 | 18 | Mysore | 01 | K.R.Nagar | 58 | K.R.Nagar |
| 59 | | | 02 | Hunsur | 59 | Hunsur |
| 60 | | | 03 | Mysore | 60 | Mysore |
| 61 | | | 04 | Heggadadevankote | 61 | Heggadadevankote |
| 62 | | | 05 | Nanjangud | 62 | Nanjangud |
| 63 | | | 06 | T.Narasipur | 63 | T.Narasipur |
| 64 | 19 | Chamarajanager | 01 | Gundlapet | 64 | Gundlapet |
| 65 | | | 02 | Chamarajanagar | 65 | Chamarajanagar |
| 66 | | | 03 | Yelandur | 66 | Yelandur |
| 67 | | | 04 | Kollegal | 67 | Kollegal |
| 68 | 20 | Mandya | 01 | Panadapur | 68 | Panadapur |
| 69 | | | 02 | Mallavalli | 69 | Mallavalli |
| 70 | 21 | Chikkodi | 01 | Gokak | 70 | Gokak |
| 71 | | | 02 | Rayabag | 71 | Rayabag |
| 72 | 22 | Yadgir | 01 | Shahapur | 72 | Shahapur |
| 73 | | | 02 | Surpur | 73 | Surpur |
| 74 | | | 03 | Yadgir | 74 | Yadgir |